ದಿನಾಂಕ: 28.04.2016ರಂದು ಡಾ|| ಕೇಶವಮೂರ್ತಿ ಆರ್. ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆ ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರ ಕೊಠಡಿಯಲ್ಲಿ ಮಧ್ಯಾಹ್ನ 12.00 ಗಂಟೆಗೆ ಜರುಗಿದ ಟೆಂಡರ್ ಆಹ್ವಾನ ಸಮಿತಿ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:

1) ಡಾ|| ಕೇಶವಮೂರ್ತಿ ಆರ್. — ಅಧ್ಯಕ್ಷರು
ನಿರ್ದೇಶಕರು
ನೆಫ್ರೋ-ಯುರಾಲಜಿ ಸಂಸ್ಥೆ.

2) ಡಾ|| ಉಮೇಶ ಎಲ್. — ಸದಸ್ಯರು
ವೈದ್ಯಕೀಯ ಅಧೀಕ್ಷಕರು
ನೆಫ್ರೋ-ಯುರಾಲಜಿ ಸಂಸ್ಥೆ.

3) ಡಾ|| ಆಶಾ ಎಸ್. — ಸದಸ್ಯ ಕಾರ್ಯದರ್ಶಿಗಳು
ಆಡಳಿತಾಧಿಕಾರಿಗಳು
ನೆಫ್ರೋ-ಯುರಾಲಜಿ ಸಂಸ್ಥೆ.

ಸದಸ್ಯ ಕಾರ್ಯದರ್ಶಿಗಳು ಅಧ್ಯಕ್ಷರನ್ನು ಹಾಗೂ ಸದಸ್ಯರನ್ನು ಸಭೆಗೆ ಆಹ್ವಾನಿಸಿ ಸಭೆಯನ್ನು ಜರುಗಿಸಲು ಕೋರಿದರು.

ಈ ಕೆಳಕಂಡ ಪ್ರಯೋಗಶಾಲಾ ಉಪಕರಣಗಳನ್ನು ಬಾಡಿಗೆ ರೂಪದಲ್ಲಿ ಪಡೆಯುವ ಸಲುವಾಗಿ ಆಹ್ವಾನಿಸಿದ್ದ ಟೆಂಡರ್‌ನ ಕವರ್ I ದಾಖಲೆಗಳನ್ನು ತೆರೆಯುವ ಬಗ್ಗೆ.

(a) Chemiluminiscene immunoassay analyser
(b) Fully automated random access clinical chemistry analyser

ಸ್ವೀಕೃತಿಯಾದ ಟೆಂಡರ್‌ಗಳನ್ನು ಇ-ಪೋರ್ಟಲ್‌ನಿಂದ ತೆರೆಯಲಾಯಿತು. ಟೆಂಡರ್‌ನಲ್ಲಿ ಭಾಗವಹಿಸಿರುವ ಟೆಂಡರ್‌ದಾರರ ಹೆಸರುಗಳು ಹಾಗೂ ಅವುಗಳ ಪಲಿತಾಂಶ ಈ ಕೆಳಕಂಡಂತೆ ಇರುವುದು ಕಂಡುಬಂದಿತು.

1) ದೀಪಾ ಶೆಟ್ಟಿ (ಮೆ|| ಇಂಪ್ಯಾಕ್ಟ್ ಲ್ಯಾಬೊರೇಟರಿ ಸಪ್ಲೈಸ್) - Accepted
2) ಮೋಹನಕೃಷ್ಣಾ ರಾಮಚಂದ್ರ (ಮೆ|| ರಾಘವ ಬಯೋ ಮೆಡಿಕಲ್ಸ್) - Rejected

ಕ್ರಮ ಸಂಖ್ಯೆ 2, ಮೆ॥ ರಾಘವ ಬಯೋ ಮೆಡಿಕಲ್ಸ್ ಸಂಸ್ಥೆಯ ಟೆಂಡರ್ ತಿರಸ್ಕೃತಗೊಂಡಿದೆ ಎಂದು ಇ-ಪೋರ್ಟಲ್‌ನಲ್ಲಿ ನಮೂದಿಸಿರುವುದನ್ನು ಸಮಿತಿಯು ಗಮನಿಸಿತು. ತಿರಸ್ಕೃತಗೊಂಡಿರುವುದಕ್ಕೆ ಕಾರಣವನ್ನು ಇ-ಪೋರ್ಟಲ್‌ನ EMD verification ನಲ್ಲಿ "Initiated, UnReconcealed, Not Matched" ಎಂದು ನಮೂದಿಸಿರುವುದನ್ನು ಸಭೆಯಲ್ಲಿ ಓದಿ ತಿಳಿಸಲಾಯಿತು.

ಸಮಿತಿಯು ಈ ಬಗ್ಗೆ ಚರ್ಚಿಸಿ ಸದರಿ ಉಪಕರಣಗಳಿಗೆ ಎರಡನೇ ಬಾರಿ ಟೆಂಡರ್ ಆಹ್ವಾನಿಸಿರುವುದರಿಂದ ಸ್ವೀಕೃತಿಯಾಗಿರುವ ಒಂದು ಟೆಂಡರ್‌ನ ದಾಖಲೆಗಳನ್ನು ಡೌನ್‌ಲೋಡ್ ಮಾಡಿ ಮೌಲ್ಯಮಾಪನ ನಡೆಸಲು ತೀರ್ಮಾನಿಸಿತು.

ಸಭೆಯಲ್ಲಿ ಹಾಜರಿದ್ದವರಿಗೆ ವಂದನೆಗಳನ್ನು ಸಲ್ಲಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ನಿರ್ದೇಶಕರು,
ನೆಫ್ರೋ-ಯುರಾಲಜಿ ಸಂಸ್ಥೆ,
ಬೆಂಗಳೂರು.